# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 539 |
| ಉತ್ತರಿಸಬೇಕಾದ ದಿನಾಂಕ | : | 11.07.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಹೈನುಗಾರರಿಗೆ ನೀಡುವ ಹಾಲಿನ ಪ್ರೋತ್ಸಾಹ ಧನಕ್ಕಾಗಿ ಬಿಡುಗಡೆಯಾಗಿರುವ ಅನುದಾನ ಎಷ್ಟು; (2022-23 ಮತ್ತು ಪ್ರಸಕ್ತ ಸಾಲಿನ ಸಂಪೂರ್ಣ ಮಾಹಿತಿ ನೀಡುವುದು.</td><td>ಹಾಲಿನ ಪ್ರೋತ್ಸಾಹಧನ ಪಾವತಿಗಾಗಿ ಬಿಡುಗಡೆಯಾಗಿರುವ ಅನುದಾನದ ವಿವರ: (ಕೋಟಿಗಳಲ್ಲಿ)
<table>
<tr><th>ಅನುದಾನದ ವಿವರ.</th><th>ಸಾಮಾನ್ಯ ವರ್ಗ</th><th>ಪ.ಜಾ.</th><th>ಪ.ಪಂ</th><th>ಒಟ್ಟು</th></tr>
<tr><td>2022-23ನೇ ಸಾಲು</td><td>1018</td><td>72</td><td>50</td><td>1140</td></tr>
<tr><td>2023-24ನೇ ಸಾಲು. (1ನೇ ಕಂತು.)</td><td>356</td><td>28</td><td>16</td><td>400</td></tr>
</table></td></tr>
<tr><td>ಆ</td><td>ರಾಜ್ಯದಲ್ಲಿ ಹೈನುಗಾರರಿಗೆ ಹಾಲಿನ ಪ್ರೋತ್ಸಾಹ ಧನವನ್ನು ನೀಡದೇ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಇ</td><td>ಬಂದಿದ್ದಲ್ಲಿ, ಹೈನುಗಾರರಿಗೆ ಬಾಕಿ ಉಳಿಸಿಕೊಂಡಿರುವ ಹಾಲಿನ ಪ್ರೋತ್ಸಾಹಧನದ ಮೊತ್ತ ಎಷ್ಟು; (2022-23 ಮತ್ತು ಪ್ರಸಕ್ತ ಸಾಲಿನ ಸಂಪೂರ್ಣ ಮಾಹಿತಿ ನೀಡುವುದು.</td><td rowspan="2">2023-24ನೇ ಸಾಲಿನಲ್ಲಿ ಮೊದಲನೇ ಕಂತಿನಲ್ಲಿ ಬಿಡುಗಡೆಯಾದ ಅನುದಾನದಲ್ಲಿ 2022-23ನೇ ಸಾಲಿನಲ್ಲಿ ಸಾಮಾನ್ಯ ವರ್ಗ ಹಾಲು ಉತ್ಪಾದಕರಿಗೆ ಪಾವತಿಗೆ ಬಾಕಿ ಇದ್ದ ನವೆಂಬರ್-2022 ರಿಂದ ಫೆಬ್ರುವರಿ-2023 ರವರೆಗೆ ಪ್ರೋತ್ಸಾಹ ಧನವನ್ನು ಪಾವತಿ ಮಾಡಲಾಗಿದೆ.<br><br>2023-24ನೇ ಸಾಲಿನಲ್ಲಿ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಮಾರ್ಚ್-2023 ರಿಂದ ಮೇ-2023 ರವರೆಗೆ ಪಾವತಿಗೆ ಬಾಕಿ ಇರುವ ಪ್ರೋತ್ಸಾಹ ಧನದ ಮೊತ್ತ ರೂ.286.98 ಕೋಟಿಗಳು.</td></tr>
<tr><td>ಈ</td><td>ಬಾಕಿ ಉಳಿಸಿಕೊಂಡಿರುವ ಹಾಲಿನ ಪ್ರೋತ್ಸಾಹ ಧನವನ್ನು ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td></tr>
</table>

..2

| | | |
|---|---|---|
| | | ಎರಡನೇ ಕಂತಿನ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದ್ದು, ಸದರಿ ಅನುದಾನವು ಬಿಡುಗಡೆಯಾದ ನಂತರ ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಮಾರ್ಚ್-2023 ರಿಂದ ಮೇ-2023ರ ಮಾಹೆಯವರೆಗೆ ಪ್ರೋತ್ಸಾಹಧನ ಪಾವತಿಗೆ ಕ್ರಮವಹಿಸಲಾಗುವುದು. |

**ಇ- ಪಸಂಮೀ 126 ಸಲೆವಿ 2023**

**(ಕೆ.ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**